ವಿ. ಹೇಮಂತಕುಮಾರ್, ಬೆಂಗಳೂರು

ನಗುವಾಗ ಹುಡುಗಿಯ ಕೆನ್ನೆಯಲ್ಲಿ ಗುಳಿ ಕಂಡರೆ ಅದೃಷ್ಟವಂತೆ. ಹೌದಾ ಸರ್?



ಹೌದು. ನೋಡುವವರಿಗೆ! ಮೊಬೈಲಲ್ಲಿ ಮುಳುಗಿದ ಪೀಳಿಗೆಯಲ್ಲಿ ನಗೆಯೇ ಅಪರೂಪ.

ರಾಜೀವ್ ಎನ್. ಮಾಗಲ್, ಸಕಲೇಶಪುರ

ಭಗವಂತನಿತ್ತ ಹೃದಯವನ್ನು ಹೊರತೆಗೆದು ಸಾಗಿಸುವಾಗ ಝೀರೋ ಟ್ರಾಫಿಕ್. ಹೃದಯ ಒಳಗಿರುವಾಗ ಬೆಲೆಯಿಲ್ಲವೆ?

ಒಳಗಿದ್ದು, ಒಳಸೇರುವ ಹೃದಯಕ್ಕೇ ಆ ತರಾತುರಿ, ಬೆಲೆ. ದೇಹದ ಹೊರಗಿರಿಸಿದ ಹೃದಯ ಕಸ!

ಬಿ. ಚಂದ್ರೇಗೌಡ, ಬೆಂಗಳೂರು

ಸಂಗೀತದ ಅಪಶ್ರುತಿಗೂ, ಸಂಸಾರದ ಅಪಶ್ರುತಿಗೂ ಏನು ವ್ಯತ್ಯಾಸ?

ಸಂಗೀತದ ಅಪಶ್ರುತಿ 'ಬ್ರೇಕಿಂಗ್ ನ್ಯೂಸ್' ಆಗುವುದಿಲ್ಲ.

ಬಿ.ಆರ್. ಉಷಾ, ಕೆನಡಾ

ರಾಜರ ಆಸ್ಥಾನದಲ್ಲಿ ನರ್ತಕಿಯರಿದ್ದರು, ನರ್ತಕರಿರಲಿಲ್ಲ. ಏಕೆ?



ರಾಜರಿಗೆ ನರ್ತನದ ಬೆಡಗಿಗಿಂತ ಬೆಡಗಿಯರ ಬೆಡಗು ಮುಖ್ಯವಾಗಿದ್ದರಿಂದ.

ಶಿವಮೊಗ್ಗ ರಮೇಶ್, ಮೈಸೂರು

ಚಿಂದಿ ಧರಿಸಿದ ನಿರ್ಗತಿಕರಿಗೂ, ಹರಕಲಿಗೆ ಸಾವಿರವಿತ್ತು ಧರಿಸುವ ಯುವಜನತೆಗೂ ವ್ಯತ್ಯಾಸ?

ಇವರಿಗೆ ಶನಿಕಾಟ; ಅವರಿಗೆ ಫ್ಯಾಶನಿಕಾಟ.

ಬಿದರಹಳ್ಳಿ ನಾಗರಾಜ್, ಹಿರೇಹಡಗಲಿ

ಪರ್ಸನಲ್‌ಗೂ, ಸೀಕ್ರೆಟ್‌ಗೂ ಏನು ವ್ಯತ್ಯಾಸ?

'ಪರ್ಸನಲ್ ಅಫೇರ್' ಎಂಬುದರಲ್ಲಿ ಪರ್ಸನಲ್ ಪರ್ಸನಲ್ಲು, ಅಫೇರ್ ಸೀಕ್ರೆಟ್ಟು!

ಬಾ.ರಂ. ಸುರೇಶ, ಶಿವಮೊಗ್ಗ

ಬದುಕು ಬಹಳ ಕಠಿಣವಾಗಿದೆ. ಬದುಕಲು ಇಷ್ಟವಾಗುತ್ತಿಲ್ಲ. ದಾರಿ ಯಾವುದಯ್ಯ ರಾಮ್?

ಆಂಬುಲೆನ್ಸ್ ಡ್ರೈವರ್ ಆಗಿಬಿಡಿ. ಸಾವಿನ ಸಾಮೀಪ್ಯ ಜೀವನ ಪ್ರೀತಿಯನ್ನು ಹೆಚ್ಚಿಸುತ್ತದೆ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ

ರೆಕ್ಕೆಗಳೇ ಇಲ್ಲದ ಹಕ್ಕಿಗಳು ಇವೆಯೆ?

ಇವೆಯಲ್ಲ – ಕೋರ್ಟ್ ಬರ್ಡ್ಸ್, ಜೈಲ್ ಬರ್ಡ್ಸ್, ಪಾರ್ಕ್ ಬೆಂಚಿನ ಲವ್ ಬರ್ಡ್ಸ್...

ಕೆ.ಎಂ. ವಿಭೂತಿ, ಹರಿಹರ

ವಿಶ್ವದ ಯಾವ ಸಮಸ್ಯೆಗೆ ನಿಮ್ಮಲ್ಲಿ ಉತ್ತರವಿಲ್ಲ?

ದಕ್ಷಿಣ, ಪೂರ್ವ, ಪಶ್ಚಿಮ ದಿಕ್ಕುಗಳಲ್ಲಿ ಏನಿಲ್ಲ ಎಂಬ ಪ್ರಶ್ನೆಗೆ 'ಉತ್ತರವಿಲ್ಲ' ಎನ್ನಬೇಕಾಗುತ್ತದೆ.

ಜಗದೀಶ್ ಬಿ. ಹೊಸೂರು, ಮೈಸೂರು

ಕೆಪಿಎಲ್ ತಂಡಗಳಿಗೆ ಕನ್ನಡದ ಹೆಸರುಗಳೇಕೆ ಇಷ್ಟವಿಲ್ಲ?

ಕೆಪಿಎಲ್ ಬದಲು ಕಪ್ರತಂ (ಕರುನಾಡು ಪ್ರಮುಖ ತಂಡ) ಎಂದಿದ್ದರೆ ಇಷ್ಟವಿರುತ್ತಿತ್ತಂತೆ.

ಮಧುಮತಿ ಅಭಿಷೇಕ್, ಬೆಂಗಳೂರು

ಪ್ರಾಯಶಃಕ್ಕೂ ಬಹುಶಃಕ್ಕೂ ಇರುವ ವ್ಯತ್ಯಾಸವೇನು?

ಶಃ=ಶಿಷ್ಯ (ಸಂಸ್ಕೃತ). ಪ್ರಾಯಶಃ ಟೀನೇಜ್ ಸ್ಟೂಡೆಂಟು; ಬಹುಶಃ ಟ್ಯುಟೋರಿಯಲ್ಲು.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಗಂಡಹೆಂಡಿರ ಜಗಳ ಉಂಡು ಮಲಗುವ ತನಕ. ಅತ್ತೆಸೊಸೆಯರ ಜಗಳ?

ಸೀರಿಯಲ್ ಶುರುವಾಗುವ ತನಕ ಜಗಳದ ಹೊಸ ವರಸೆಗಾಗಿ ಅತ್ತ ನೋಡಬೇಕಲ್ಲ!

ಬಿ.ಸಂ. ಸುಬ್ಬಣ್ಣ, ಬೆಂಗಳೂರು

ನಾರೀಮಣಿ ಇದ್ದಂತೆ ನರಮಣಿ ಯಾಕಿಲ್ಲ?

ನಾರಿಗೆ ಮಣಿದನಂತರ ಅವನು ನರನಾಗದೆ ವಾನರನಾಗುವುದರಿಂದ.

ಎಂ.ಎ. ಕುಮಾರ್, ಬೆಂಗಳೂರು

ಹಿರಿಯ ನಾಗರಿಕರಿಗೆ ಕೆಲವರು ಮುದುಕ, ಮುದುಕಿ ಎಂದು ತೆಗಳುವುದೇಕೆ?

ಹುಟ್ಟುಗುಣ–ಬೊಗಳುವ ನಾಯಿ ಬಾನ್ಸುರಿ ನುಡಿಸುವುದಿಲ್ಲ.

## ವಾರದ ಪ್ರಶ್ನೆ

ಜೀವಿ, ಗೊಂಡೇದಹಳ್ಳಿ

ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಇರುವಂತೆ ಪುರುಷರಿಗೇಕಿಲ್ಲ?

ರೇಷ್ಮೆಗೆ ತೋರಿಸಬೇಕಾದ ಕಾಳಜಿ ಗೋಣಿಪಟ್ಟೆಗೆ ಬೇಕಾಗಿಲ್ಲ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ

ತೊಂಬತ್ತು ತುಂಬಿದ್ದರೂ ಅಧಿಕಾರ ಬೇಕೆನ್ನುವವರಿಂದ ಏನು ನಿರೀಕ್ಷಿಸಬಹುದು?

ಅಧಿಕಾರದಲ್ಲಿದ್ದರೆ – ಶೀಘ್ರದಲ್ಲೇ ಒಂದು ದಿನದ ಸರ್ಕಾರಿ ರಜೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರೀಮಂತರ ಮಕ್ಕಳೇ ಪೋಲಿ–ಪಟಾಲಂಗಳಾಗಲು ಕಾರಣ?

ಕುರುಡು ಕಾನೂನು ಕುರುಡು ಕಾಂಚಾಣದೊಡನೆ ಕೈ ಜೋಡಿಸುವುದರಿಂದ.

ಗಂಜಾಂ ನಾಗರಾಜ್, ಮೈಸೂರು

ಪ್ರೀತಿ ಕುರುಡು ಎನ್ನುತ್ತಾರಲ್ಲಾ?



ನಿಜ. ಪ್ರೇಮಿಗಳು ಒಬ್ಬರನ್ನೊಬ್ಬರು ಹಿಡಿದುಕೊಂಡು ನಡೆಯುವುದೇ ಅದಕ್ಕೆ ಸಾಕ್ಷಿ.

ಅನಸೂಯ ಟಿ, ಕೇದಿಗೆಮನೆ

ನನ್ನ ಪ್ರಶ್ನೆಗಳಿಗೆ ನೀವಿತ್ತ ಉತ್ತರಗಳನ್ನೆಲ್ಲ ಹಾರ ಮಾಡಿ ಹಾಕಬೇಕೆಂದಿದ್ದೇನೆ. ಎಲ್ಲಿ ಯಾವಾಗ ಸಿಗುವಿರಿ?

2023ರ ಫೆಬ್ರುವರಿ 29ರಂದು, ಮಾಲ್ಗುಡಿಯಲ್ಲಿ.

ವಿಜಯಕುಮಾರ್ ಎಚ್.ಕೆ. ರಾಯಚೂರು

ಬಹುತೇಕ ನಟಿಯರಿಗೆ ಮೇಕಪ್ ಮಾಡಲು ಗಂಡಸರೇ ಏಕೆ ಇರುತ್ತಾರೆ ರಾಮ್?

ಹೆಣ್ಣನ್ನು ತುಟಿಪಿಟಿಕ್ಕೆನ್ನದೆ ಸಮೀಪದಿಂದ ಗಂಟೆಗಟ್ಟಲೆ ನೋಡುವ ಗುಣ ಇರುವುದರಿಂದ.

■ ರಾಮ್